Publication : Prajavani
Date: June 20, 2014
Page No: 2
Edition: All

SARA Media Net
Simply communicate...

# ಭಾವನಾ ಹೊಸ ಪರ್ವ

ಸದಾ 'ಟ್ರಾವೆಲರ್' ಆಗಿರಲು ಇಷ್ಟಪಡುವ ಭಾವನಾ ಬದುಕಿನ ಅಲೆದಾಟದಲ್ಲಿ ಈಗ ನಿಂತಿರುವ ಹೊಸ ನಿಲ್ದಾಣ 'ಸಿನಿಮಾ ನಿರ್ಮಾಣ'. 'ನಿರುತ್ತರ' ಸಿನಿಮಾ ಅವರ ಕ್ರಿಯಾಶೀಲ ಹುಡುಕಾಟದ ಹೊಸ ಸಾಧ್ಯತೆಯೂ ಹೌದು. ಅಂದಹಾಗೆ, ಗಿರೀಶ ಕಾಸರವಳ್ಳಿಯವರ ಸಿನಿಮಾದಲ್ಲಿ ಅಭಿನಯಿಸುವ ಅವರ ಆಸೆಯಿನ್ನೂ ಬಾಕಿ ಇದೆ.



'ಬಾಲ್ಯದಿಂದ ಈವರೆಗೆ ಚಿತ್ರರಂಗದಲ್ಲೇ ಬೆಳೆದು ಬಂದವಳು ನಾನು. ಇದನ್ನು ಬಿಟ್ಟು ಎಲ್ಲಿ ಹೋಗಲಿ? ತೆರೆಯ ಮೇಲೆ ಕಂಡಿರಲಿಲ್ಲ ಅಷ್ಟೇ...'

'ಭಾಗೀರಥಿ' ಸಿನಿಮಾದ ಬಳಿಕ ಎಲ್ಲೂ ಕಾಣಿಸುತ್ತಿಲ್ಲವೇಕೆ? ಎಂಬ ಮಾತಿಗೆ ಹುಸಿಮುನಿಸು ತೋರುತ್ತ ಮಾತು ಆರಂಭಿಸಿದ ಭಾವನಾ, ಚಿತ್ರರಂಗದಿಂದ ತಾವೆಲ್ಲೂ ದೂರ ಹೋಗಿಲ್ಲ ಎಂಬ ಸ್ಪಷ್ಟನೆ ನೀಡಿದರು. ರಾಜಕೀಯ ಹಾಗೂ ಸಿನಿಮಾ- ಎರಡು ದೋಣಿಗಳ ಪಯಣ ನಡೆಸುತ್ತಿರುವ ತಾವು, ಅಭಿನಯದಿಂದ ದೂರವಿದ್ದರೂ ಉದ್ಯಮದ ನಂಟು ತೊರೆದಿಲ್ಲ ಎಂದರು. ಸಹೋದರ ಅರವಿಂದ ಬಂಡವಾಳ ಹೂಡುತ್ತಿರುವ 'ನಿರುತ್ತರ' ಚಿತ್ರಕ್ಕೆಂದು ಬಣ್ಣ ಹಚ್ಚಿಕೊಂಡು ಸಿದ್ಧವಾಗಿರುವ ಅವರ ಮಾತುಗಳಲ್ಲಿ ಸಿನಿಮಾ ಲೋಕವೇ ತುಂಬಿಕೊಂಡಿತ್ತು.

'ಹೋಮ್‌ಟೌನ್ ಪ್ರೊಡಕ್ಷನ್' ಮೂಲಕ ಅರವಿಂದ ಅವರು ಇವೆಂಟ್ ಮ್ಯಾನೇಜ್‌ಮೆಂಟ್ ನಿರ್ವಹಿಸುತ್ತಿದ್ದಾರೆ. ಇದರ ಮೂವರು ನಿರ್ದೇಶಕರಲ್ಲಿ ಭಾವನಾ ಕೂಡ ಒಬ್ಬರು. ಅರವಿಂದ ಹಲವು ಚಿತ್ರಗಳಿಗೆ ಗ್ರಾಫಿಕ್ ಡಿಸೈನರ್, ವಿಶುವಲ್ ಇಫೆಕ್ಟ್ ಡಿಸೈನರ್, ಕಾಂಪೋಸರ್ ಆಗಿ ಕೆಲಸ ಮಾಡಿದ್ದಾರೆ. ಅವರ ಕ್ರಿಯಾಶೀಲತೆಯ ಇನ್ನೊಂದು ಭಾಗ ಈ ಚಿತ್ರ ನಿರ್ಮಾಣ ಎನ್ನುವ ಭಾವನಾ, 'ಚಿತ್ರರಂಗವೆಂದರೆ ಕಲೆ ಹಾಗೂ ತಂತ್ರಜ್ಞಾನದ ಅತ್ಯುತ್ತಮ ಕಾಂಬಿನೇಶನ್. ಹೀಗಾಗಿ ಅರವಿಂದ ಸಿನಿಮಾ ನಿರ್ಮಾಣಕ್ಕೆ ಮುಂದಾಗಿದ್ದಾರೆ' ಎಂದು ಸಂತಸದಿಂದ ಹೇಳಿಕೊಂಡರು.

'ಭಾಗೀರಥಿ ಚಿತ್ರ ತೆರೆ ಕಂಡು ಎರಡು ವರ್ಷಗಳಾದವು. ಅದರ ನಂತರ ಬೇರಾವುದೇ ಸಿನಿಮಾ ಮಾಡಿಲ್ಲ. ಆದರೆ ಚಿತ್ರೋದ್ಯಮಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದೆ' ಎನ್ನುವ ಅವರು, ಕಳೆದ ವರ್ಷ ನಡೆದ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದ ಸಮಿತಿ ಸದಸ್ಯೆಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಧರಿಸಿದ ಅನೇಕ ಸಮಾರಂಭಗಳನ್ನು 'ಹೋಮ್‌ಟೌನ್'ನಿಂದ ಆಯೋಜಿಸಿದ್ದಾರೆ. ನಿರ್ಲಕ್ಷ್ಯಕ್ಕೆ ಒಳಗಾದ ಹಳೆಯ ಸಂಗೀತ ವಾದ್ಯಗಳನ್ನು ಮತ್ತೆ ಜನರತ್ತ ಕೊಂಡೊಯ್ಯಲು ಮಾಡಿದ ಪ್ರಯತ್ನಕ್ಕೆ ಸ್ಪಂದನೆ ಸಿಕ್ಕಿದೆ. ಇದು ಭಾವನಾಗೆ ಖುಷಿ ನೀಡಿದೆಯಂತೆ.

ಕಾರ್ಯಕ್ಷೇತ್ರ, ನಿರ್ಮಾಣ ಕ್ಷೇತ್ರಕ್ಕೂ ವಿಸ್ತರಿಸಿರುವುದು ಭಾವನಾ ಅವರಲ್ಲಿ ಸಂತಸ ತಂದಿದೆ. 'ಅದರ ಜತೆಗೇ ಅಂಜಿಕೆಯೂ ಆಗ್ತಿದೆ. ಅರವಿಂದ ಕಟ್ಟಿದ ಕನಸಿನ ಗೋಪುರಕ್ಕೆ ಈ ಚಿತ್ರದ ಮೂಲಕ ಇಟ್ಟಿಗೆ ಜೋಡಿಸುವ ಕೆಲಸ ಶುರುವಾಗಿದೆ' ಎನ್ನುವ ಅವರಿಗೆ, ಈ ಹಿಂದೆ ತಮ್ಮ ಸಂಸ್ಥೆಯಿಂದ ಮಾಡಿದ ಕೆಲಸಗಳ ಅನುಭವ ನೆರವಾಗಬಲ್ಲದು ಎಂಬ ನಿರೀಕ್ಷೆಯಿದೆ.

ಪ್ರತಿಭೆ ಇದ್ದರೂ ಅವಕಾಶ ಸಿಗದವರ ಸಾಲಿನಲ್ಲಿ ತಮ್ಮನ್ನು ಸೇರಿಸಲು ಭಾವನಾಗೆ ಸುತಾರಾಂ ಇಷ್ಟವಿಲ್ಲ. ಅವಕಾಶ ಸಿಗದಿರುವುದಕ್ಕೆ ತಮ್ಮಲ್ಲಿರುವ ಕೆಲವು ನ್ಯೂನತೆಗಳೂ ಕಾರಣವಾಗಿರಬಹುದು ಎಂಬ ಸಂಶಯ ಅವರದು! 'ಅದನ್ನು ನಾನು ಪಾಸಿಟಿವ್ ನ್ಯೂನತೆ ಅಂತ ಕರೆಯುತ್ತೇನೆ. ಯಾಕೆಂದರೆ ನಾನು ನನ್ನದೇ ಆದ ಸೀಮಿತ ಗೆರೆಯನ್ನು ಹಾಕಿಕೊಂಡೆ. ಗ್ಲಾಮರ್ ಇದ್ದರೂ, ಅಂಥ ಪಾತ್ರಗಳಲ್ಲಿ ನಾನು ಅಭಿನಯಿಸಿದ್ದರೂ ಚಿತ್ರರಂಗದವರಿಗೆ ಅಗತ್ಯವಾದ ಗ್ರಾಮರ್ ಅನ್ನು ನಾನು ಅಳವಡಿಸಿಕೊಳ್ಳದೇ ಹೋಗಿದ್ದಕ್ಕೆ ಹೀಗಾಗಿರಬಹುದು' ಎಂಬ ಊಹೆ ಅವರದು.

ಎರಡು ವರ್ಷಗಳ ಅವಧಿಯಲ್ಲಿ ಸಾಕಷ್ಟು ಅವಕಾಶಗಳು ಅವರನ್ನು ಹುಡುಕಿಕೊಂಡು ಬಂದವು. ಆದರೆ ಪಾತ್ರಗಳ ಆಯ್ಕೆಯಲ್ಲಿ ತಳೆದ ನಿಲುವಿನಿಂದಾಗಿ ಅವುಗಳನ್ನು ಒಪ್ಪಿಕೊಳ್ಳಲಿಲ್ಲ ಎಂದು ಭಾವನಾ ಹೇಳುತ್ತಾರೆ. ಅದರಲ್ಲೂ ರಕ್ತಪಾತ ಹರಿಸುವ ಸಿನಿಮಾಗಳೆಂದರೆ ಅವರಿಗೆ ಭಯ! 'ಮಚ್ಚು, ಚೂರಿ, ರಕ್ತ ನೋಡಿದರೇನೇ ನನಗೆ ತಲೆಸುತ್ತು ಬರುತ್ತದೆ. ದುಷ್ಕರ್ಮಿಗಳಿಗೆ ಅಂಥ ಸಿನಿಮಾಗಳು ಕ್ರಿಮಿನಲ್ ಕೃತ್ಯ ಎಸಗಲು ಐಡಿಯಾ ನೀಡಬಹುದು ಎಂಬ ಆತಂಕ ನನ್ನದು. ನಮ್ಮಲ್ಲಿ ಎಷ್ಟೊಂದು ಒಳ್ಳೆಯ ಕಥೆಗಳು ಇವೆ! ಅವುಗಳತ್ತ ಗಮನ ಹರಿಸಬೇಕಲ್ಲವೇ?' ಎಂದು ಪ್ರಶ್ನಿಸುತ್ತಾರೆ.

ರಾಜಕೀಯದ ದೋಣಿಯಲ್ಲೂ ಪಯಣಿಸಿರುವ ಭಾವನಾ, ಅದರಲ್ಲಿ ಪಡೆದ ಅನುಭವಗಳನ್ನು ಬಿಚ್ಚಿಡುತ್ತಾರೆ. ರಾಜಕೀಯ ಸೇರುವಂತೆ ಅವರ ಮನವೊಲಿಸಿದ್ದು ಕಲಾವಿದೆ ಹಾಗೂ ಸಚಿವೆ ಉಮಾಶ್ರೀ. ಚುನಾವಣೆ ಸಂದರ್ಭದಲ್ಲಿ ರಾಜ್ಯ ಸುತ್ತಿದ ಭಾವನಾ, ಸಾಮಾನ್ಯ ಜನರ ಕಷ್ಟ ಸುಖಗಳನ್ನು ಹತ್ತಿರದಲ್ಲಿ ಕಂಡುಕೊಂಡಿದ್ದಾರೆ. 'ನಮ್ಮನ್ನು

ಸ್ಟಾರ್ ಥರ ನೋಡಿಕೊಳ್ತಾರೆ. ಆಗ ಹಾಗೂ ಬಳಿಕ ನಾವೇನು ಅನ್ನುವುದನ್ನು ಈ ಓಡಾಟ ತಿಳಿಸಿಕೊಟ್ಟಿದೆ. ಮುಖ್ಯವಾಗಿ ತೆರೆ ಮತ್ತು ಜನರ ಮಧ್ಯೆ ಯಾವುದೇ ಅಂತರ ಈ ಸುತ್ತಾಟದಲ್ಲಿ ಕಾಣುವುದಿಲ್ಲ. ಇದು ನಮ್ಮನ್ನು ಹಾಗೂ ಜನರನ್ನು ಅರ್ಥ ಮಾಡಿಕೊಳ್ಳಲು ನೆರವಾಗುತ್ತದೆ' ಎನ್ನುವುದು ಅವರ ಅನುಭವ.

ಪರ್ಸ್‌ನಲ್ಲಿ ಸ್ವಲ್ಪವೇ ಸ್ವಲ್ಪ ಹಣ ಇಟ್ಟುಕೊಂಡು ಸುತ್ತಾಡಬಯಸುವ ಭಾವನಾಗೆ, ಸದಾ 'ಟ್ರಾವೆಲರ್' ಆಗಿರಲು ಇಷ್ಟ. ಯಾರೇನೇ ಅಂದುಕೊಂಡರೂ ಅವರಿಗೆ ಬೇಸರವಿಲ್ಲ. 'ಅಧ್ಯಾತ್ಮದ ಕಡೆ ಒಲವು ಬೆಳೆದಿದ್ದು ನಿಜ. ಆದರೆ ಅಮ್ಮ ಅಗಲಿದ ಮೇಲೆ ಮನೆ ಕಡೆ ಜವಾಬ್ದಾರಿ ಹೆಚ್ಚಾಗಿದೆ. ಬೇರೆ ಕೆಲಸಗಳೂ ಹೆಚ್ಚಾಗಿವೆ' ಎನ್ನುತ್ತಾರೆ.

ಸಹೋದರ ನಿರ್ಮಿಸುತ್ತಿರುವ 'ನಿರುತ್ತರ' ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸುತ್ತಿರುವ ಅವರಿಗೆ ಪೂರ್ಣಾವಧಿ ನಿರ್ಮಾಪಕಿ ಅಥವಾ ನಿರ್ದೇಶಕಿಯಾಗಲು ಇಷ್ಟವಿಲ್ಲ. ಅಪೂರ್ವ ಕಾಸರವಳ್ಳಿ ನಿರ್ದೇಶನದ ಈ ಚಿತ್ರದಲ್ಲಿ ನಟನೆ ಬಿಟ್ಟು ಹೆಚ್ಚೇನೂ ಜವಾಬ್ದಾರಿ ವಹಿಸಿಕೊಂಡಿಲ್ಲ ಎನ್ನುವ ಭಾವನಾಗೆ, ಗಿರೀಶ ಕಾಸರವಳ್ಳಿಯವರ ಸಿನಿಮಾದಲ್ಲಿ ಅಭಿನಯಿಸುವ ಆಸೆ ಬೆಟ್ಟದಷ್ಟಿದೆ. 'ಕಾಸರವಳ್ಳಿಯವರ ಚಿತ್ರವೆಂದರೆ, ಅದೊಂದು ಸುಂದರ ಕಲಾಕೃತಿ ಇದ್ದಂತೆ. ಆ ದಿನಕ್ಕಾಗಿ ಕಾಯುತ್ತಿದ್ದೇನೆ. ನೋಡೋಣ ಮುಂದಿನ ದಿನಗಳಲ್ಲಿ ಏನಾಗುತ್ತದೋ...' ಎನ್ನುತ್ತ ಭಾವನಾ ಮಾತು ಮುಗಿಸಿದರು.

◆ ಆನಂದತೀರ್ಥ ಪ್ಯಾಟಿ

# 70, Samruddhi, 1st Main, 2nd Block, Ayyappanagar, K. R. Puram, Bangalore – 560 036
Telefax : 080 25619525 Mobile : 094482 21565, 094489 02288
E-mail : saramedianet@gmail.com, amrithjogi@gmail.com
www.saramedianet.com